# ಜನತಾ ಜೀವವೈವಿಧ್ಯ ದಾಖಲಾತಿಗಳ ಕುರಿತ ಟಿಪ್ಪಣಿ

**ಉದ್ದೇಶ:** ಜೀವವೈವಿಧ್ಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ಅವುಗಳಿಂದ ಬರಬಹುದಾಂತಹ ಲಾಭಗಳ ನ್ಯಾಯ ಸಮ್ಮತ್ತ ಹಂಚಿಕೆಯನ್ನು ಕಾರ್ಯರೂಪಕ್ಕೆ ತರಲು ಭಾರತ ಸಂಸತ್ತು ಜೈವಿಕ ವೈವಿಧ್ಯ ಅಧಿನಿಯಮ 2002ನ್ನು ಜಾರಿಗೊಳಿಸಿತು. ಭಾರತ ಸರ್ಕಾರವು ಮೂರು ವಿಕೇಂದ್ರೀಕೃತ ಕಾನೂನಾತ್ಮಕ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಸ್ಥಳೀಯ ಮಟ್ಟದಲ್ಲಿ ಜೈವಿಕ ವೈವಿಧ್ಯ ಅಧಿನಿಯಮ 2002ನ್ನು ಅನುಷ್ಠಾನಗೊಳಿಸಲು ಜೀವವೈವಿಧ್ಯ ನಿರ್ವಹಣಾ ಸಮಿತಿಯು ಕಾರ್ಯನಿರ್ವಹಿಸುತ್ತದೆ.

**ಜೀವವೈವಿಧ್ಯ ನಿರ್ವಹಣಾ ಸಮಿತಿ ರಚನೆ:**

ಜೈವಿಕ ವೈವಿಧ್ಯ ಅಧಿನಿಯಮ 2002ರ ಪರಿಚ್ಛೇದ 41(1) ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005 ನಿಯಮ 21 ರನ್ವಯ ಪ್ರತಿ ಸ್ಥಳೀಯ ಸಂಸ್ಥೆಯು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿರುತ್ತದೆ. ಸ್ಥಳೀಯ ಸಂಸ್ಥೆಯ ಅಧ್ಯಕ್ಷರೇ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯಲ್ಲಿ ತೋಟಗಾರಿಕೆ, ವೈದ್ಯರು, ಸ್ಥಳೀಯ ಸಸ್ಯಶಾಸ್ತ್ರಜ್ಞರು, ಬುಡಕಟ್ಟು ಮುಖ್ಯಸ್ಥರುಗಳು, ಕೃಷಿಕರು, ಅರಣ್ಯೇತರ ಉತ್ಪನ್ನಗಳ ಸಂಗ್ರಹಕಾರರು, ಮೀನುಗಾರರು, ಸಮಾಜ ಸೇವಕರು, ಶೈಕ್ಷಣಿಕ ಹಿನ್ನಲೆ ಉಳ್ಳವರು ಮತ್ತು ಜೀವವೈವಿಧ್ಯತೆ ಬಗೆಗೆ ಅರಿವಿರುವ ಯಾರೇ ಸ್ಥಳಿಯ ವ್ಯಕ್ತಿಯನ್ನು ಈ ಸಮಿತಿಯಲ್ಲಿ ಸದ್ಯಸರನ್ನಾಗಿ ಮಾಡಿಕೊಳ್ಳಬಹುದಾಗಿರುತ್ತದೆ. ಈ ಸಮಿತಿಯ ಮುಖ್ಯ ಜವಾಬ್ದಾರಿ ಸ್ಥಳಿಯ ಮಟ್ಟದಲ್ಲಿ ಜೀವವೈವಿಧ್ಯತೆಯನ್ನು ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಲಾಭಗಳ ನ್ಯಾಯ ಸಮ್ಮತ್ತ ಹಂಚಿಕೆ.

**ಜನತಾ ಜೀವವೈವಿಧ್ಯ ದಾಖಲಾತಿ ಕುರಿತು:**

- ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ರಚನೆಯಾದ ನಂತರ ಸಮಿತಿಯ ಸದಸ್ಯರುಗಳು ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಬೇಕು. ಆದರೆ ಸದಸ್ಯರುಗಳಿಗೆ ದಾಖಲಾತಿ ಮಾಡಲು ಕಷ್ಟಸಾಧ್ಯವಾಗಿರುವುದರಿಂದ ಕರ್ನಾಟಕ ಸರ್ಕಾರದ ಜಂಟಿ ಸುತ್ತೋಲೆ ಸಂಖ್ಯೆ: ಅಪಜೀ 153 ಇನ್ ವಿ 2014 ದಿನಾಂಕ: 29/05/2014 ರನ್ವಯ ಜಿಲ್ಲಾ ಮಟ್ಟದ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಿದ್ದು, ಅವರ ಮುಂಖಾತರ ವಿಶ್ವವಿದ್ಯಾಲಯದ ಉಪನ್ಯಾಸಕರನ್ನು, ಕಾಲೇಜಿನ ಜೀವವಿಜ್ಞಾನದ ಉಪನ್ಯಾಸಕರನ್ನು ಸಂಯೋಜಕರಾಗಿ ನೇಮಿಸಿ, ಅವರ ಸಹಾಯದಿಂದ ಗ್ರಾಮ ಪಂಚಾಯತಿ ಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿಯನ್ನು ತಯಾರಿಸಲಾಗುತ್ತಿದೆ.

- ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಿಂದ ಸಂಸ್ಥೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ ವಿಭಾಗ), ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ, ತಾಲ್ಲೂಕು ಪಂಚಾಯತಿರವರೊಂದಿಗೆ ತ್ರೀಪಕ್ಷೀಯ ಒಡಂಬಡಿಕೆ ಮಾಡಿಕೊಂಡು ತಯಾರಿಸಲಾಗುತ್ತಿದೆ.

- ಪುರಸಭೆ/ನಗರಸಭೆ ಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಿಂದ ಸಂಸ್ಥೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ ವಿಭಾಗ), ಮುಖ್ಯಾಧಿಕಾರಿಗಳು, ಪುರಸಭೆ/ನಗರಸಭೆ ರವರೊಂದಿಗೆ ತ್ರೀಪಕ್ಷೀಯ ಒಡಂಬಡಿಕೆ ಮಾಡಿಕೊಂಡು ತಯಾರಿಸಲಾಗುತ್ತಿದೆ. ಅದರಂತೆ ಮಹಾನಗರ ಪಾಲಿಕೆ ಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಿಂದ, ಸಂಸ್ಥೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ), ಆಯುಕ್ತರು, ಮಹಾನಗರ ಪಾಲಿಕೆರವರೊಂದಿಗೆ ತ್ರೀಪಕ್ಷೀಯ ಒಡಂಬಡಿಕೆ ಮಾಡಿಕೊಂಡು ತಯಾರಿಸಲಾಗುತ್ತಿದೆ.

- ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜನತಾ ಜೀವವೈವಿಧ್ಯ ದಾಖಲಾತಿಯನ್ನು ತಯಾರಿಸುವ ಕುರಿತು ಸಂಯೋಜಕರುಗಳಿಗೆ, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಅನೇಕ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗಿದೆ.

- ಜನತಾ ಜೀವವೈವಿಧ್ಯ ದಾಖಲಾತಿಗಳು ಮೂರು ಭಾಗಗಳನ್ನು ಹೊಂದಿದ್ದು, ಭಾಗ-1 ರಲ್ಲಿ ಗ್ರಾಮ ಪಂಚಾಯತಿಯ ಇತಿಹಾಸ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ನಕ್ಷೆ, ಕ್ಷೇತ್ರ ಭೇಟಿಯ ಛಾಯಾಚಿತ್ರ, ಸಮಿತಿಯ ಸದಸ್ಯರ ವಿವರ, ನಾಟಿ ವೈದ್ಯರ ಮಾಹಿತಿ, ಸಾವಯವ ಕೃಷಿ/ಜೇನು ಸಾಕಾಣಿಕೆ/ಹೈನುಗಾರಿಕೆಗಳಲ್ಲಿ ಜ್ಞಾನ ಹೊಂದಿರುವ ವ್ಯಕ್ತಿಗಳ ವಿವರ ಮತ್ತು ಸಮಿತಿ ಹಾಗೂ ಕಂಪೆನಿಗಳ ನಡುವೆ ಜೈವಿಕ ಸಂಪನ್ಮೂಲಗಳ ವಿವರವನ್ನು ಹೊಂದಿರುತ್ತದೆ. ಭಾಗ-02, 25 ನಮೂನೆಗಳನ್ನೊಳಗೊಂಡಿದ್ದು, ಅದರಲ್ಲಿ ಕೃಷಿ, ವನ್ಯ, ಮಾನವಪೋಷಿತ ಮತ್ತು ಮೀನು ವೈವಿಧ್ಯತೆಗಳ ಮಾಹಿತಿಯನ್ನು ಹೊಂದಿರುತ್ತದೆ. ಭಾಗ-03, ಗ್ರಾಮ ಪಂಚಾಯತಿಯ ಸಾಮಾನ್ಯ ವಿವರವನ್ನು ಹೊಂದಿರುತ್ತದೆ.

- ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ತಾಂತ್ರಿಕ ಬೆಂಬಲ ಗುಂಪನ್ನು ವಿವಿಧ ಇಲಾಖೆಗಳಾದ ಅರಣ್ಯ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಸ್ಥಳೀಯ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ಸ್ವಾಯತ್ತ ಜಿಲ್ಲಾ ಮಂಡಳಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಗಿಡಮೂಲಿಕೆ ವೈದ್ಯರು ಮುಂತಾದವರನ್ನೊಳಗೊಂಡಂತೆ ರಚಿಸುವುದು. ಪ್ರತಿಯೊಂದು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಜನತಾ ಜೀವವೈವಿಧ್ಯ ದಾಖಲಾತಿಗಳಲ್ಲಿ ಸ್ಥಳೀಯ ಸಸ್ಯ, ಪ್ರಾಣಿ ಹಾಗೂ ಅವುಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನ, ಅದರ ಪ್ರಾದೇಶಿಕ ವ್ಯಾಪ್ತಿಯಲ್ಲಿನ ಸಂರಕ್ಷಣೆಗೆ ಸಂಬಂಧಿಸಿದ ಪ್ರಸಕ್ತ ಕ್ರಮಗಳನ್ನು ಸೇರ್ಪಡಿಸಲು ತಾಂತ್ರಿಕ ಬೆಂಬಲ ಗುಂಪು ಸಹಾಯ ಮಾಡುತ್ತದೆ.

- ತಾಂತ್ರಿಕ ಸಲಹಾ ಗುಂಪುಗಳು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಶುಲ್ಕ ಸಂಗ್ರಹಣೆ ಹಾಗೂ ಸ್ಥಳೀಯ ಜೀವವೈವಿಧ್ಯ ನಿಧಿಗೆ ಸಂಬಂಧಿಸಿದಂತೆ ಸಹಾಯ ನೀಡಬಹುದಾಗಿದೆ. ಪಾರಂಪರಿಕ ತಾಣಗಳ ನಿರ್ವಹಣೆ, ಪವಿತ್ರ ತೋಪುಗಳು, ಪವಿತ್ರ ಕೊಳಗಳ ನಿರ್ವಹಣೆಗೆ ಸ್ಥಳೀಯ ಜೀವವೈವಿಧ್ಯ ನಿಧಿಯನ್ನು ಬಳಸಬಹುದಾಗಿರುತ್ತದೆ. ಅದೇ ರೀತಿ ಸಂಗ್ರಹಿಸಿದ ಸ್ಥಳೀಯ ಜೀವವೈವಿಧ್ಯ ನಿಧಿಯನ್ನು ಸೂಕ್ತ ರೀತಿಯಲ್ಲಿ ಖರ್ಚು ಮಾಡಲು ತಾಂತ್ರಿಕ ಸಲಹಾ ಗುಂಪು ಸಹಾಯ ಮಾಡುತ್ತದೆ.

- ಜನತಾ ಜೀವವೈವಿಧ್ಯ ದಾಖಲಾತಿಗಳ ನಿರ್ವಹಣೆ, ಅಧಿಕೃತಗೊಳಿಸುವಿಕೆ ಹಾಗೂ ಸಿಂಧುಗೊಳಿಸುವುದು ಜೀವವೈವಿಧ್ಯ ನಿರ್ವಹಣಾ ಸಮಿತಿಯದ್ದಾಗಿದ್ದು, ಸಂಬಂಧಪಟ್ಟ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ ವಿಭಾಗ)ಗಳ ನೇತೃತ್ವದಲ್ಲಿ ರಚನೆಗೊಂಡ ತಾಂತ್ರಿಕ ಪರಿಣಿತ ಸಮಿತಿಯ ಮಾರ್ಗದರ್ಶನ ಪಡೆಯುವುದಾಗಿರುತ್ತದೆ.

- ಜನತಾ ಜೀವವೈವಿಧ್ಯ ದಾಖಲಾತಿಗಳ ಕರಡು ಪ್ರತಿ ಸಿದ್ಧಗೊಂಡ ಬಳಿಕ, ಸದರಿ ದಾಖಲಾತಿಯನ್ನು ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಅವರ ಪ್ರತಿನಿಧಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ರವರ ಅಧ್ಯಕ್ಷತೆಯಲ್ಲಿ ನಡೆಯುವ ತಾಂತ್ರಿಕ ಪರಿಣಿತ ಸಮಿತಿಯ ಮುಂದೆ ಮಂಡಿಸಬೇಕು.

- ಈ ಸಮಿತಿಯಲ್ಲಿ ಜಂಟಿ ನಿರ್ದೇಶಕರು ಕೃಷಿ/ತೋಟಗಾರಿಕೆ, ಪಶುಸಂಗೋಪನೆ ಮತ್ತು ಹಿರಿಯ ಪ್ರಾಧ್ಯಾಪಕರು ಪ್ರಾಣಿಶಾಸ್ತ್ರ, ಮತ್ತು ಸಸ್ಯಶಾಸ್ತ್ರ, ಅಧಿಕಾರಿಗಳಿದ್ದು ದಾಖಲಾತಿಯನ್ನು ಪರಿಶೀಲಿಸಿ ಸಲಹೆಗಳಿದ್ದಲ್ಲಿ ನೀಡುತ್ತಾರೆ. ತಾಂತ್ರಿಕ ಪರಿಣಿತ ಸಮಿತಿಯಿಂದ ದಾಖಲಾತಿಯು ಪರಿಶೀಲನೆಗೊಂಡ ಬಳಿಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಅವರ ಪ್ರತಿನಿಧಿಗಳು ಹಾಗೂ ಉಪ ಅರಣ್ಯ

ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ರವರ ಧೃಡೀಕರಣ ಪತ್ರವನ್ನು ಅಳವಡಿಸಿ, ಅಂತಿಮವಾಗಿ ಸಂಬಂಧಪಟ್ಟ ಜೀವವೈವಿದ್ಯ ನಿರ್ವಹಣಾ ಸಮಿತಿಯಿಂದ ಅನುಮೋದನೆ ಪಡೆದುಕೊಳ್ಳಬೇಕು. ತದನಂತರ ದಾಖಲಾತಿಯನ್ನು ತಯಾರಿಸಿದ ಸಂಯೋಜಕರು/ಸರ್ಕಾರ/ಸರ್ಕಾರೇತರ ಸಂಸ್ಥೆಗಳು ಧೃಡೀಕರಣ ಪತ್ರವನ್ನು ಅಳವಡಿಸಿ, ಒಂದು ಹಾರ್ಡ್ ಪ್ರತಿ ಮತ್ತು ಪ್ರತ್ಯೇಕವಾಗಿ (ಒಂದು ಸಿ.ಡಿಯಲ್ಲಿ ಒಂದು ಪಂಚಾಯತಿಯ ದಾಖಲಾತಿ- Word ಮತ್ತು PDF ಮಾದರಿಯಲ್ಲಿ) ಎರಡು ಸಿ.ಡಿಯಲ್ಲಿ ಸಾಫ್ಟ್ ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗರವರಿಗೆ ಸಲ್ಲಿಸುವುದು.

- ಸದರಿ ಸಂಯೋಜಕರು/ಸರ್ಕಾರ/ಸರ್ಕಾರೇತರ ಸಂಸ್ಥೆಗಳು ಸಲ್ಲಿಸಿದ ದಾಖಲಾತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯರವರು ಹಾರ್ಡ್ ಪ್ರತಿಯನ್ನು ಜೀವವೈವಿಧ್ಯ ನಿರ್ವಹಣಾ ಸಮಿತಿಗೆ ಮತ್ತು ಸಾಫ್ಟ್ ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯರವರ ಕಛೇರಿಯಲ್ಲಿ ಇಟ್ಟುಕೊಳ್ಳುವುದು ಮತ್ತು ಮಂಡಳಿಯ ಸುಪರ್ದಿಗೊಸ್ಕರ ಸಾಫ್ಟ್ ಪ್ರತಿಯನ್ನು ಕಳುಹಿಸಿಕೊಡುವುದು.